# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು - 570 006.

**ಆಡಳಿತ ವಿಭಾಗ**

ಸಂಖ್ಯೆ: ಕರಾಮುವಿ/ಸಿಬ್ಬಂದಿ-2/1149/2024-25 ದಿನಾಂಕ:21.11.2024

## ಸುತ್ತೋಲೆ

**ವಿಷಯ:** ವಿಶ್ವವಿದ್ಯಾನಿಲಯದ ಎಲ್ಲಾ ಖಾಯಂ/ಕಾಲಿಕ ವೇತನ ಶ್ರೇಣಿ/ಗ್ರೇಡೇಡ್ ಪೇ/ ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸುವ ಕ್ರಮದ ಕುರಿತು.

**ಉಲ್ಲೇಖ:** 1.ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ:ಆಇ 4(ಇ) ಸೇನಿಸೇ 2023, ದಿನಾಂಕ: 27.06.2023.
2.ಈ ಕಛೇರಿ ಆದೇಶದ ಸಮ ಸಂಖ್ಯೆ ದಿನಾಂಕ:20.11.2024.
3.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.11.2024.

* * * * * *

ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇವೆಗಳು-1),ರವರು, ರಫೀಕ್ ಮಸೀಹ್ ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:18.12.2014 ರ ತೀರ್ಪು ರಾಜ್ಯ ಸರ್ಕಾರದ ಮೇಲೆ ಬಂಧನಕಾರಿಯಾಗಿರುವುದರಿಂದ ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ಅಂಗಸಂಸ್ಥೆಗಳು ತನ್ನ ಅಧೀನ ಸರ್ಕಾರಿ ನೌಕರರು/ಸಿಬ್ಬಂದಿಗಳಿಗೆ ತಪ್ಪಾಗಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ಮರುಪಾವತಿಸಿಕೊಳ್ಳುವಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಪರಿಶೀಲಿಸಿ ಸೂಕ್ತ ನಿರ್ಧಾರ ತಳೆಯಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇಲಾಖಾ ಮುಖ್ಯಸ್ಥರು ತಮ್ಮ ಅಧೀನ ಕಚೇರಿ/ಸಿಬ್ಬಂದಿಗಳಿಗೆ ಉಲ್ಲೇಖಿತ-1ರ ಸುತ್ತೋಲೆಯಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಕ್ತ ನಿರ್ದೇಶನ ನೀಡುವುದು ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ಸುತ್ತೋಲೆಯಂತೆ ಕ್ರಮವಹಿಸಲು ಉಲ್ಲೇಖ- 2 ಆದೇಶವನ್ನು ಹೊರಡಿಸಲಾಗಿದ್ದು, ಉಲ್ಲೇಖ-2ರ ಆದೇಶದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸುವ ಸಂಬಂಧ ಛಾಪ ಕಾಗದದಲ್ಲಿ ಮುಚ್ಚಳಿಕೆ ಪಡೆದು ಕ್ರಮವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಅಡಕ: ಮುಚ್ಚಳಿಕೆ ಪತ್ರದ ಮಾದರಿ

21/11/2024

**ಕುಲಸಚಿವ**

**ಗೆ,**

ಸಂಬಂಧಪಟ್ಟ ಎಲ್ಲಾ ಖಾಯಂ/ಕಾಲಿಕ ವೇತನ ಶ್ರೇಣಿ/ಗ್ರೇಡೇಡ್ ಪೇ/ತಾತ್ಕಾಲಿಕ ಬೋಧಕ ಮತ್ತುಬೋಧಕೇತರ ಸಿಬ್ಬಂದಿವರ್ಗದವರು.

**ಪ್ರತಿ:**

1. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಶೈಕ್ಷಣಿಕ), ಕರಾಮುವಿ, ಮೈಸೂರು.
3. ಕುಲಸಚಿವ(ಪರೀಕ್ಷಾಂಗ), ಕರಾಮುವಿ, ಮೈಸೂರು.
4. ಡೀನ್ (ಅಧ್ಯಯನ ಕೇಂದ್ರಗಳು),ಕರಾಮುವಿ, ಮೈಸೂರು.
5. ಎಲ್ಲಾ ವಿಭಾಗಗಳ ಮುಖ್ಯಸ್ಥರು, ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
6. ಕಾರ್ಯಪಾಲಕ ಅಭಿಯಂತರ, ಇಂಜಿನಿಯರ್ ವಿಭಾಗ, ಕರಾಮುವಿ, ಮೈಸೂರು.
7. ಎಲ್ಲಾಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷರು, ಕರಾಮುವಿ, ಮೈಸೂರು.
8. ಎಲ್ಲಾ ನಿರ್ದೇಶಕರು/ಸಂಯೋಜನಾಧಿಕಾರಿಗಳು, ಕರಾಮುವಿ, ಮೈಸೂರು.
9. ಎಲ್ಲಾ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.
10. ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು – ವಿ.ವಿ ನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
11. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
12. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
13. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.

M A4 Letter New-376

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತ ಗಂಗೋತ್ರಿ, ಮೈಸೂರು - 570 006.

# ಮುಚ್ಚಳಿಕೆ

........................................................................ ಆದ ನಾನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:........... ........................................................................................ ರನ್ವಯ ನೌಕರರ ನೇಮಕಾತಿ, ವರ್ಗಾವಣೆ, ವೃಂದ ಬದಲಾವಣೆ, ನಿಯೋಜನೆ, ಮುಂಬಡ್ತಿ, ವೇತನ ಶ್ರೇಣಿ ಬದಲಾವಣೆ ಮತ್ತು ವಾರ್ಷಿಕ ವೇತನ ಬಡ್ತಿ/ಕಾಲಬದ್ಧ ವೇತನ ಬಡ್ತಿ/ಸ್ವಯಂಚಾಲಿತ ವೇತನ ಬಡ್ತಿ ಮಂಜೂರಾತಿ ಇತ್ಯಾದಿ ಸಂದರ್ಭಗಳಲ್ಲಿ ಒಂದು ವೇಳೆ ವೇತನ ಹೆಚ್ಚಿಗೆ ನಿಗಧಿಯಾದ ಪಕ್ಷದಲ್ಲಿ ಅಂತಹ ಮೊತ್ತವನ್ನು ನನ್ನ ವೇತನದಿಂದ ಅಥವಾ ಪಿಂಚಣಿಯಿಂದ ಅಥವಾ ನನ್ನ ಕಾನೂನಿನ ವಾರಸುದಾರರಿಂದ ವಸೂಲು ಮಾಡಿಕೊಳ್ಳಲು ಅಭ್ಯಂತರವಿಲ್ಲವೆಂದು ಹಾಗೂ ವಿಶ್ವವಿದ್ಯಾನಿಲಯವು ಕೈಗೊಳ್ಳುವ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆಂದು ಈ ಮುಚ್ಚಳಿಕೆಯನ್ನು ಸಲ್ಲಿಸುತ್ತಿದ್ದೇನೆ.

ದಿನಾಂಕ: .........................

ಸ್ಥಳ: ............................

ಸಹಿ: ..............................................

ಹೆಸರು: ..............................................

ಹುದ್ದೆ: ..............................................

ವಿಭಾಗ: ..............................................

ಮೊಬೈಲ್ ನಂ:..........................................

ಖಾಯಂ ವಿಳಾಸ:..........................................

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು - 570 006.

**ಆಡಳಿತ ವಿಭಾಗ**

ಸಂಖ್ಯೆ: ಕರಾಮುವಿ/ಸಿಬ್ಬಂದಿ-2/1149/2024-25 ದಿನಾಂಕ:20.11.2024

**ಕಚೇರಿ ಆದೇಶ**

**ವಿಷಯ:** ವಿಶ್ವವಿದ್ಯಾನಿಲಯದ ಎಲ್ಲಾ ಖಾಯಂ/ಕಾಲಿಕ ವೇತನ ಶ್ರೇಣಿ/ಗ್ರೇಡೇಡ್ ಪೇ/ ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸುವ ಕ್ರಮದ ಕುರಿತು.

**ಉಲ್ಲೇಖ:** 1.ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ:ಆಇ 4(ಇ) ಸೇನಿಸೇ 2023, ದಿನಾಂಕ: 27.06.2023.

2.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 20.11.2024.

* * * * * *

ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇವೆಗಳು-1),ರವರು, ರಫೀಕ್ ಮಸೀಹ್ ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:18.12.2014 ರ ತೀರ್ಪು ರಾಜ್ಯ ಸರ್ಕಾರದ ಮೇಲೆ ಬಂಧನಕಾರಿಯಾಗಿರುವುದರಿಂದ ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ಅಂಗಸಂಸ್ಥೆಗಳು ತನ್ನ ಅಧೀನ ಸರ್ಕಾರಿ ನೌಕರರು/ ಸಿಬ್ಬಂದಿಗಳಿಗೆ ತಪ್ಪಾಗಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ಮರುಪಾವತಿಸಿಕೊಳ್ಳುವಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಪರಿಶೀಲಿಸಿ ಸೂಕ್ತ ನಿರ್ಧಾರ ತಳೆಯಬೇಕಾಗಿರುತ್ತದೆ. ಆದಾಗ್ಯೂ, ಈ ಕುರಿತು ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ:

1. ಎಲ್ಲಾ ಇಲಾಖೆಗಳು ತಮ್ಮ ಅಧೀನ ಸಿಬ್ಬಂದಿಗಳಿಗೆ ವೇತನ ನಿಗಧೀಕರಣ ಅಥವಾ ಭತ್ಯೆ ಮಂಜೂರಾತಿ ಮಾಡುವಾಗ ಕಡ್ಡಾಯವಾಗಿ ಮೂರು ಹಂತದಲ್ಲಿ ಮೇಲ್ವಿಚಾರಣೆ ಮಾಡತಕ್ಕದ್ದು, ಸಂಬಂಧಪಟ್ಟ ಆಡಳಿತ ಹಾಗೂ ಲೆಕ್ಕಪತ್ರ ಶಾಖೆಗಳು ವೇತನ ನಿಗಧೀಕರಣ ಮತ್ತು ಭತ್ಯೆ ಮಂಜೂರಾತಿಯನ್ನು ಪರಿಶೀಲಿಸಿ ದೃಢೀಕರಿಸತಕ್ಕದ್ದು.
2. ಈ ಸಂದರ್ಭದಲ್ಲಿ ಒಂದು ವೇಳೆ ವೇತನ ಹೆಚ್ಚಿಗೆ ನಿಗಧಿಯಾದ ಪಕ್ಷದಲ್ಲಿ ಅಂತಹ ಮೊತ್ತವನ್ನು ತಮ್ಮ ವೇತನದಿಂದ ಅಥವಾ ಪಿಂಚಣಿಯಿಂದ ಅಥವಾ ತಮ್ಮ ಕಾನೂನಿನ ವಾರಸುದಾರರಿಂದ ವಸೂಲು ಮಾಡಿಕೊಳ್ಳಲು ತಮ್ಮ ಅಭ್ಯಂತರವಿಲ್ಲವೆಂದು ನೌಕರರಿಂದ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
3. ಮುಚ್ಚಳಿಕೆ ಪಡೆದುಕೊಳ್ಳದೇ ಅಥವಾ ತಪ್ಪು ವೇತನ ನಿಗಧೀಕರಣವನ್ನು ಮುಂದುವರೆಸುವುದರಿಂದ ಸರ್ಕಾರಕ್ಕೆ ನಷ್ಟವುಂಟು ಮಾಡಿದಲ್ಲಿ ಈ ರೀತಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ತಪ್ಪು ನಿಗಧಿಪಡಿಸಿದ ಅಧಿಕಾರಿ/ನೌಕರರುಗಳಿಂದ ಸಮಾನವಾಗಿ ವಸೂಲು ಮಾಡತಕ್ಕದ್ದು.
4. ನೌಕರರು ತಪ್ಪು ಕ್ಲೈಮ್‌ನ್ನು ಸಲ್ಲಿಸಿದ ಮೇರೆಗೆ (misrepresentation) ಅಥವಾ ನೌಕರರಿಂದ ಮುಚ್ಚಳಿಕೆಯನ್ನು ಬರೆಯಿಸಿಕೊಂಡು ಮಂಜೂರು ಮಾಡಲಾದ ವೇತನ ನಿಗಧೀಕರಣ ಅಥವಾ ಭತ್ಯೆ ಮಂಜೂರಾತಿಯಲ್ಲಿ ತಪ್ಪಾಗಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ಸರ್ಕಾರಕ್ಕೆ ಹಿಂಪಾವತಿಸಿಕೊಳ್ಳುವ ಹಕ್ಕನ್ನು ಸರ್ಕಾರ ಕಾದಿರಿಸಿಕೊಂಡಿದೆ.
5. ಈ ಹಿಂದೆ 'ಸಿ' ಅಥವಾ 'ಡಿ' ವೃಂದದ ಹುದ್ದೆಯಲ್ಲಿದ್ದಾಗ ತಪ್ಪಾಗಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ಸದರಿ ನೌಕರರು 'ಎ' ಅಥವಾ 'ಬಿ' ವೃಂದಕ್ಕೆ ಮುಂಬಡ್ತಿ ಹೊಂದಿದ ನೌಕರರಿಂದ ವಸೂಲು ಮಾಡುವಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಾಧಕವಾಗುವುದಿಲ್ಲ.
6. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರ ನಿವೃತ್ತ ನೌಕರಿಂದ ಅಥವಾ ಒಂದು ವರ್ಷಗೊಳಗೆ ನಿವೃತ್ತಿ ಹೊಂದಲಿರುವ ನೌಕರರಿಂದ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ವಸೂಲಾತಿ ಮಾಡುವಂತಿಲ್ಲ. ಆದುದರಿಂದ, ಎಲ್ಲಾ ಇಲಾಖೆಗಳು ನೌಕರರ ನಿವೃತ್ತಿಯ ಒಂದು ವರ್ಷ ಪೂರ್ವದಲ್ಲಿ ಅವರ ವೇತನ ನಿಗಧೀಕರಣವನ್ನು ಪರಾಮರ್ಶಿಸತಕ್ಕದ್ದು, ಸ್ವ-ಇಚ್ಛಾ ನಿವೃತ್ತಿ ಕೋರಿಕೆಗಳನ್ನು ಪರಿಗಣಿಸುವಾಗ ಸಂಬಂಧಿತ ಅಧಿಕಾರಿ/ನೌಕರರಿಂದ ಯಾವುದೇ ಹೆಚ್ಚುವರಿ ಪಾವತಿಸಿ ಮೊತ್ತ ವಸೂಲು ಮಾಡಬೇಕಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

7. ಐದು ವರ್ಷಗಳಿಗಿಂತ ಹಿಂದಿನ ಅವಧಿಯಲ್ಲಿ ಪಾವತಿಸಲಾದ ಹೆಚ್ಚಿಗೆ ಮೊತ್ತವನ್ನು ವಸೂಲು ಮಾಡುವಂತಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿಳಿಸಿರುವುದರಿಂದ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಸರ್ಕಾರಿ ನೌಕರರ ವೇತನ ನಿಗಧೀಕರಣವನ್ನು ಸಂಬಂಧಿತ ಸಕ್ಷಮ ಪ್ರಾಧಿಕಾರಗಳು ಪರಾಮರ್ಶಿಸತಕ್ಕದ್ದು.
8. ಹೆಚ್ಚುವರಿಯಾಗಿ ಪಾವತಿಸಿದ ಮೊತ್ತವನ್ನು ಮನ್ನಾ ಮಾಡುವ ಪ್ರಕರಣಗಳನ್ನು ಆರ್ಥಿಕ ಇಲಾಖೆಯ ನಿರ್ದಿಷ್ಟ ಸಹಮತಿಯ ಮೇರೆಗೆ ಪರಿಗಣಿಸತಕ್ಕದ್ದು.

ಇಲಾಖಾ ಮುಖ್ಯಸ್ಥರು ತಮ್ಮ ಅಧೀನ ಕಚೇರಿ/ಸಿಬ್ಬಂದಿಗಳಿಗೆ ಮೇಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಕ್ತ ನಿರ್ದೇಶನ ನೀಡುವುದು ಎಂದು ಉಲ್ಲೇಖಿತ-1ರ ಸುತ್ತೋಲೆಯಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ಸುತ್ತೋಲೆಯಂತೆ ಕ್ರಮವಹಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಸಂಬಂಧ ಸದರಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕ್ರಮವಹಿಸುವಂತೆ ಆದೇಶಿಸಲಾಗಿದೆ.

ವಿಶ್ವವಿದ್ಯಾನಿಲಯದ ಎಲ್ಲಾ ಖಾಯಂ/ಕಾಲಿಕ ವೇತನ ಶ್ರೇಣಿ/ಗ್ರೇಡೇಡ್ ಪೇ/ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿವರ್ಗದವರಿಗೆ ಪಾವತಿಸಲಾಗುವ ವೇತನ ಮತ್ತು ಇತರೆ ಭತ್ಯೆಗಳಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸುವ ಹಂತದಲ್ಲಿ ಮುಚ್ಚಳಿಕೆ ಪಡೆದು ಕ್ರಮವಹಿಸತಕ್ಕದ್ದು.

ಮುಂದುವರಿದಂತೆ, ಒಂದು ವೇಳೆ ವಿಶ್ವವಿದ್ಯಾನಿಲಯದ ಎಲ್ಲಾ ಖಾಯಂ/ಕಾಲಿಕ ವೇತನ ಶ್ರೇಣಿ/ಗ್ರೇಡೇಡ್ ಪೇ/ ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿವರ್ಗದವರಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಹೆಚ್ಚುವರಿಯಾಗಿ ಪಾವತಿಸಲಾಗಿದ್ದಲ್ಲಿ ವಸೂಲಾತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಣಕಾಸು ವಿಭಾಗದವರು ನೀಡಲು ಸೂಚಿಸಿದೆ.

20/11/2024

**ಕುಲಸಚಿವ**

ಗೆ,

ಸಂಬಂಧಪಟ್ಟ ಎಲ್ಲಾ ಖಾಯಂ/ಕಾಲಿಕ ವೇತನ ಶ್ರೇಣಿ/ಗ್ರೇಡೇಡ್ ಪೇ/ತಾತ್ಕಾಲಿಕ ಬೋಧಕ ಮತ್ತುಬೋಧಕೇತರ ಸಿಬ್ಬಂದಿವರ್ಗದವರು.

**ಪ್ರತಿ:**

1. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಶೈಕ್ಷಣಿಕ), ಕರಾಮುವಿ, ಮೈಸೂರು.
3. ಕುಲಸಚಿವ(ಪರೀಕ್ಷಾಂಗ), ಕರಾಮುವಿ, ಮೈಸೂರು.
4. ಡೀನ್ (ಅಧ್ಯಯನ ಕೇಂದ್ರಗಳು),ಕರಾಮುವಿ, ಮೈಸೂರು.
5. ಎಲ್ಲಾ ವಿಭಾಗಗಳ ಮುಖ್ಯಸ್ಥರು, ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
6. ಕಾರ್ಯಪಾಲಕ ಅಭಿಯಂತರ, ಇಂಜಿನಿಯರ್ ವಿಭಾಗ, ಕರಾಮುವಿ, ಮೈಸೂರು.
7. ಎಲ್ಲಾಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷರು, ಕರಾಮುವಿ, ಮೈಸೂರು.
8. ಎಲ್ಲಾ ನಿರ್ದೇಶಕರು/ಸಂಯೋಜನಾಧಿಕಾರಿಗಳು, ಕರಾಮುವಿ, ಮೈಸೂರು.
9. ಎಲ್ಲಾ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.
10. ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು - ವಿ.ವಿ ನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
11. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
12. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
13. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.